# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

# ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ.04/2024**

**ದೋ.ಸಾ. : 12 ಫ್ರಾ.ಸಾ. : 05**

| | | |
|---|---|---|
| ಸಾಕ್ಷಿಯ ಹೆಸರು | : | ಹೇಮಲತಾ ಗುಡಿಗಾರ್ |
| ಗಂಡನ ಹೆಸರು | : | ಮಹೇಶ ಗುಡಿಗಾರ್ |
| ವಯಸ್ಸು | : | 38 ವರ್ಷ |
| ಕೆಲಸ | : | ಮನೆ ಕೆಲಸ |
| ವಾಸ | : | ಕಟಗೇರಿ, ತೆರ್ನಮಕ್ಕಿ, ಮುರ್ಡೇಶ್ವರ, ತಾಃ ಭಟ್ಕಳ. |

**ದಿನಾಂಕಃ 28-10-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ಚಾಸಾ-1 ನನಗೆ ಗೊತ್ತು, ಅವರು ತೆರ್ನಮಕ್ಕಿಯ ಕಟಗೇರಿಯಲ್ಲಿ ವಾಸವಾಗಿದ್ದು, ಅವರಿಗೆ ಸೇರಿದ ಒಟ್ಟು ಆರು ಬಾಡಿಗೆ ಮನೆಗಳು ಇರುತ್ತವೆ. ಸದರಿ ಬಾಡಿಗೆ ಮನೆಗಳ ಪೈಕಿ ಒಂದು ಮನೆಯಲ್ಲಿ ಸುಮಾರು 8 ವರ್ಷಗಳಿಂದ ನಾನು ಬಾಡಿಗೆಗೆ ವಾಸವಾಗಿರುತ್ತೇನೆ. ನಾನು ವಾಸವಾಗಿರುವ ಬಾಡಿಗೆ ಮನೆಯಲ್ಲಿ ನಾನು, ನನ್ನ ಗಂಡ, ಮಕ್ಕಳು ಹಾಗೂ ಅತ್ತೆಯೊಂದಿಗೆ ವಾಸವಾಗಿರುತ್ತೇನೆ. ಚಾಸಾ-10 ಜಯಂತಿ ಮತ್ತು 11 ರಾಜೇಶ್ವರಿ ರವರು ಸಹಾ ಸದರಿ ಮನೆಗಳಲ್ಲಿ ಬಾಡಿಗೆಗೆ ವಾಸವಾಗಿರುತ್ತಾರೆ. ಈಗ ನ್ಯಾಯಾಲಯದ ವಿಸಿಯಲ್ಲಿ ಕಾಣುತ್ತಿರುವ ಆರೋಪಿ ನನಗೆ ಗೊತ್ತು, ಅವರು ದಿನಾಂಕಃ 15.10.2023 ರಂದು ಸದರಿ ಬಾಡಿಗೆ ಮನೆಗಳ ಪೈಕಿ, ಒಂದು ಮನೆಗೆ ಆತ ಹಾಗೂ ಅವನೊಂದಿಗೆ ಆತನ ಹೆಂಡತಿಯಾದ ಮೃತೆ ನಂದಿನಿ ಮತ್ತು ಇಬ್ಬರು ಮಕ್ಕಳೊಂದಿಗೆ ಬಾಡಿಗೆಗೆ ಬಂದಿದ್ದರು ಹಾಗೂ ಅವರು ಚೆನ್ನಾಗಿ ಬಾಳುವೆ ಮಾಡುತ್ತಿದ್ದರು. ಆರೋಪಿಯನ್ನು ನಾನು ಎರಡು ಬಾರಿ ನೋಡಿರುತ್ತೇನೆ. ಅವರು ಬಾಡಿಗೆಗೆ ವಾಸವಾಗಿದ್ದ ಮನೆಯು ನಮ್ಮ ಮನೆಯಿಂದ ಸುಮಾರು 15 ಅಡಿ ದೂರದಲ್ಲಿ ಇರುತ್ತದೆ. ನಮ್ಮ ಮನೆಗೆ ಹಾಗೂ ಮನೆಯ ಹೊರಗೆ ವಿಧ್ಯುತ್ ದೀಪದ ಬೆಳಕಿನ ವ್ಯವಸ್ಥೆ ಇರುತ್ತದೆ.

2. ದಿನಾಂಕಃ 17.10.2023 ರಂದು ನಾನು ಮನೆಯಲ್ಲಿದ್ದಾಗ ನಮ್ಮ ಮನೆಯ ಹೊರಗಡೆ ಸಂಜೆ 7.00 ರಿಂದ 7.15 ಗಂಟೆ ಸಮಯದಲ್ಲಿ "ಕಾಪಾಡಿ" "ಕಾಪಾಡಿ" ಎಂಬ ಶಬ್ದ

ಕೇಳಿ ಬಂದಿದ್ದು, ಆಗ ನಾನು ಮನೆಯ ಹೊರಗೆ ಬಂದು ನೋಡಿದಾಗ, ನಮ್ಮ ಮನೆಯ ಮುಂದುಗಡೆ ಓಡಾಡುವ ದಾರಿಯಲ್ಲಿ ನಂದಿನಿಯ ಕೊಲೆಯಾಗಿತ್ತು, ಆಕೆಯ ಹಣೆಯ ಹತ್ತಿರ, ಹೊಟ್ಟೆ ಹತ್ತಿರ, ಗದ್ದದ ಹತ್ತಿರ ಕತ್ತರಿಸಿದ ಗಾಯಗಳಾಗಿ ರಕ್ತ ಸುರಿಯುತ್ತಿತ್ತು. ಸದರಿ ದೃಶ್ಯವನ್ನು ನಾನು ಮನೆಯ ಹೊರಗಿನ ವಿದ್ಯುತ್ ದೀಪದ ಬೆಳಕಿನಲ್ಲಿ ನೋಡಿರುತ್ತೇನೆ. ಅಲ್ಲಿ ಮನೆಯ ಮಾಲೀಕರು, ಪೊಲೀಸರು ಹಾಗೂ ಸುತ್ತಮುತ್ತಲಿನ ಜನ ಸೇರಿಕೊಂಡಿದ್ದರು ಹಾಗೂ ಆಕೆಯ ಮಗಳು ಸಾನಿತ್ಯಾ ಸಹಾ ಇದ್ದಳು, ಆದರೆ ಆರೋಪಿ ಸ್ಥಳದಲ್ಲಿ ಇರಲಿಲ್ಲ. ಆನಂತರ ಪೊಲೀಸರ ತನಿಖೆಯಿಂದ ಆರೋಪಿ ಲೊಕೇಶನು ತನ್ನ ಹೆಂಡತಿಯಾದ ನಂದಿನಿಯನ್ನು ಕತ್ತಿಯಿಂದ ಕಡಿದು ಕೊಲೆ ಮಾಡಿರುತ್ತಾನೆ ಎಂದು ತಿಳಿದು ಬಂದಿರುತ್ತದೆ. ಈ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ. ಆದರೆ, ನಂದಿನಿಯನ್ನು ಆರೋಪಿಯು ಕೊಲೆ ಮಾಡಿದ್ದನ್ನು ನಾನು ನೋಡಿರುವುದಿಲ್ಲ. ಭಟ್ಕಳ ನ್ಯಾಯಾಲಯದಲ್ಲಿ ನಾನು ಹೇಳಿಕೆಯನ್ನು ನೀಡಿರುತ್ತೇನೆ. ಸದರಿ ಹೇಳಿಕೆಯನ್ನು ನಿಪಿ–13 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–13(ಎ) ಎಂದು ಗುರುತಿಸಲಾಯಿತು. ನಿಪಿ–2 ಪೋಟೋದಲ್ಲಿ ಸಾಕ್ಷಿಯು ಮೃತೆ ನಂದಿನಿಯ ಶವವನ್ನು ನೋಡಿ ಗುರುತಿಸಿರುತ್ತಾರೆ.

(ಈ ಹಂತದಲ್ಲಿ ಊಟದ ಸಮಯವಾಗಿದ್ದರಿಂದ, ಮುಖ್ಯ ವಿಚಾರಣೆಯನ್ನು ಮದ್ಯಾಹ್ನ 3.00 ಗಂಟೆಗೆ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ.

**ಸಾಕ್ಷಿಯನ್ನು ಪುನಃ ಕರೆಯಿಸಿ ಮದ್ಯಾಹ್ನ 3.00 ಗಂಟೆಗೆ ಪ್ರಮಾಣ ವಚನ ಬೋಧಿಸಲಾಯಿತು.**

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಮಾನ್ಯ ಅಭಿಯೋಜಕರು ಅನುಮತಿಯನ್ನು ಕೇಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಗಮನಿಸಿ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಸರಕಾರಿ ಅಭಿಯೋಜಕರಿಂದಃ**

3. ಆರೋಪಿಯು ಬಾಡಿಗೆಗೆ ಬಂದಾಗಿನಿಂದಲೂ ಆತ ತನ್ನ ಹೆಂಡತಿಯಾದ ನಂದಿನಿಯೊಂದಿಗೆ ಸಣ್ಣಪುಟ್ಟ ವಿಷಯಕ್ಕೆ ಜಗಳ ಮಾಡುತ್ತಾ ಕೂಗಾಡುತ್ತಿದ್ದ ಶಬ್ದ ನಮ್ಮ ಮನೆಗೆ ಕೇಳಿಸುತ್ತಿತ್ತು ಎಂದರೆ ಸರಿಯಲ್ಲ. ದಿನಾಂಕಃ 17.10.2023 ರಂದು ಸಂಜೆ ಸಮಯದಲ್ಲಿ ಆರೋಪಿಯು ತನ್ನ ಹೆಂಡತಿ ನಂದಿನಿಯೊಂದಿಗೆ ಜಗಳ ಮಾಡಿಕೊಳ್ಳುತ್ತಾ ಕೂಗಾಡುತ್ತಿರುವ ಶಬ್ದ ಕೇಳಿಸಿರುತ್ತದೆ ಎಂದರೆ ಸರಿಯಲ್ಲ. ನಂದಿನಿ "ಕಾಪಾಡಿ" "ಕಾಪಾಡಿ" ಎಂದು ಕೂಗಿಕೊಳ್ಳುತ್ತಾ ಮನೆಯ ಹೊರಗೆ ಓಡಿ ಬರುವಾಗ ಆಕೆಯ ಹಿಂದೆ ಆರೋಪಿಯು ಸಹಾ ಕೈಯಲ್ಲಿ ಕತ್ತಿ ಹಿಡಿದು ಬೆನ್ನಟ್ಟಿ ಓಡಿಸಿಕೊಂಡು ಬಂದು ಕತ್ತಿಯಿಂದ ನಂದಿನಿಯ ಗದ್ದದ ಕೆಳಗೆ ಹೊಡೆದಿದ್ದು, ಆಕೆ ಅಲ್ಲಿಯೇ ಕೆಳಗೆ ಬಿದ್ದು ಒದ್ದಾಡುತ್ತಿದ್ದಳು ಎಂದರೆ ಸಾಕ್ಷಿಯು ನಾನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ಮೃತೆ ನಂದಿನಿಯ ಶವದ ಹತ್ತಿರ ಆಕೆಯ ಮಗಳು ಸಾನಿತ್ಯಾಗೆ ಚಾಸಾ–10 ಜಯಂತಿ ಹಿಡಿದುಕೊಂಡಿದ್ದಳು ಎಂದರೆ ಸಾಕ್ಷಿಯು ಸ್ಥಳದಲ್ಲಿ ಸಾನಿತ್ಯಾ ಇದ್ದಳು, ಆದರೆ ಆಕೆಯನ್ನು ಯಾರು ಹಿಡಿದುಕೊಂಡಿದ್ದರು ಎಂದು ನಾನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿಯು ತನ್ನ ಹೆಂಡತಿ ನಂದಿನಿಯ ಮೇಲೆ ಕತ್ತಿಯಿಂದ ಹಲ್ಲೆ ಮಾಡುವ ಸಮಯದಲ್ಲಿ ಸ್ಥಳಕ್ಕೆ ಚಾಸಾ–1 ರವರು ಬಂದಿದ್ದು, ಅವರನ್ನು ನೋಡಿದ ಕೂಡಲೇ ಆರೋಪಿಯು ಭಯದಿಂದ ತನ್ನ ಕೈಯಲ್ಲಿದ್ದ ಕತ್ತಿಯನ್ನು ಹಿಡಿದುಕೊಂಡು ಕಾಂಪೌಂಡ್ ಹಾರಿ ಓಡಿ ಹೋದನು ಎಂದರೆ ಸಾಕ್ಷಿಯು ನಾನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿಯು ತನ್ನ ಹೆಂಡತಿಯೊಂದಿಗೆ ಸಣ್ಣ ಪುಟ್ಟ ವಿಷಯಕ್ಕೆ ಜಗಳ ಮಾಡುತ್ತಿದ್ದರಿಂದ, ಆಕೆಯನ್ನು ಕೊಲೆ ಮಾಡುವ ಉದ್ದೇಶದಿಂದ, ಕತ್ತಿಯನ್ನು ಹಿಡಿದುಕೊಂಡು ಬಂದು ಆಕೆಯನ್ನು ಕೊಲೆ ಮಾಡಿದ್ದನ್ನು ನಾನು ನೋಡಿರುತ್ತೇನೆ ಎಂದರೆ ಸಾಕ್ಷಿಯು ನಾನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ಘಟನೆ ನಡೆದ ಸಮಯದಲ್ಲಿ ನಂದಿನಿಯ ಮಗಳಾದ ಸಾನಿತ್ಯಾ ಮಾತ್ರ ಸ್ಥಳದಲ್ಲಿದ್ದು, ಆದರೆ, ಅಕೆಯ ಮಗ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿ. ಆರೋಪಿಯೇ ನಂದಿನಿಯನ್ನು ಕೊಲೆ ಮಾಡಿರುತ್ತಾನೆ ಎಂದು ನಾನು ಪೊಲೀಸರ ಮುಂದೆ ದಿನಾಂಕಃ 18.10.2023 ರಂದು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯಲ್ಲಿರುವ "ಈ ದಂಪತಿಗಳು --- ಕಡಿದು ಕೊಲೆ ಮಾಡಿರುತ್ತಾನೆ" ಎಂಬ ಹೇಳಿಕೆಯ ಭಾಗವನ್ನು ನಿಪಿ–14 ಎಂದು ಗುರುತಿಸಲಾಯಿತು. ನಾನು ಭಟ್ಕಳ ನ್ಯಾಯಾಲಯದಲ್ಲಿ ನನ್ನ ಸ್ವ–ಇಚ್ಛೆಯಿಂದ ಒತ್ತಡ ಇಲ್ಲದೇ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿ. ನಾನು

ಘಟನೆಯನ್ನು ಪ್ರತ್ಯಕ್ಷವಾಗಿ ನೋಡಿದ್ದರೂ ಸಹಾ, ಆರೋಪಿಯು ನಮ್ಮ ಮನೆಯ ಪಕ್ಕದ ಮನೆಯಲ್ಲಿ ಬಾಡಿಗೆಗೆ ವಾಸವಾಗಿದ್ದರಿಂದ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಆರ್.ಕೆ.ಎಂ ವಕೀಲರಿಂದ**

ಈ ದಿನ ಆರೋಪಿ ಪರ ವಕೀಲರು ಹಾಜರಿಲ್ಲದ ಕಾರಣ, ಪಾಟೀ ಸವಾಲು ಇಲ್ಲ ಎಂದು ತೆರೆದುಕೊಳ್ಳಲಾಯಿತು.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ.